ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 104-108
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಕರ್ನಾಟಕದಲ್ಲಿ ಪಾರಂಪರಿಕ ಮತ್ತು ಪ್ರವಾಸೋದ್ಯಮದ ಬೆಳವಣಿಗೆ

**ಸವಿತಾ ಕೆ.ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***
*ಕರ್ನಾಟಕವು ತನ್ನ ಸಮೃದ್ಧ ಪಾರಂಪರಿಕ ಸಂಪತ್ತು, ಐತಿಹಾಸಿಕ ಸ್ಮಾರಕಗಳು ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯ ಮೂಲಕ ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಪಾರಂಪರಿಕ ತಾಣಗಳು ರಾಜ್ಯದ ಸಾಂಸ್ಕೃತಿಕ ಗುರುತನ್ನು ಉಳಿಸುವುದರ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಮುಖ ಆಧಾರವಾಗಿವೆ. ಈ ಅಧ್ಯಯನವು ಕರ್ನಾಟಕದಲ್ಲಿ ಪಾರಂಪರಿಕ ಸಂಪನ್ಮೂಲಗಳು ಮತ್ತು ಪ್ರವಾಸೋದ್ಯಮದ ಬೆಳವಣಿಗೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುತ್ತದೆ. ಐತಿಹಾಸಿಕ ಸ್ಥಳಗಳ ಸಂರಕ್ಷಣೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮ ನೀತಿಗಳ ಪರಿಣಾಮಗಳನ್ನು ಅಧ್ಯಯನ ಮಾಡಲಾಗಿದೆ. ಪಾರಂಪರಿಕ ತಾಣಗಳ ಸಮರ್ಪಕ ನಿರ್ವಹಣೆಯು ಸ್ಥಳೀಯ ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೆ ಸಹಕಾರಿಯಾಗುತ್ತದೆ ಎಂಬುದನ್ನು ಲೇಖನವು ಚರ್ಚಿಸುತ್ತದೆ. ಜೊತೆಗೆ, ಸುಸ್ಥಿರ ಪ್ರವಾಸೋದ್ಯಮದ ದೃಷ್ಟಿಕೋನದಿಂದ ಭವಿಷ್ಯದ ಅಭಿವೃದ್ಧಿಯ ಸಾಧ್ಯತೆಗಳನ್ನು ಗುರುತಿಸಲಾಗಿದೆ.*

***Keywords:*** *ಪಾರಂಪರಿಕ ತಾಣಗಳು, ಪ್ರವಾಸೋದ್ಯಮ ಅಭಿವೃದ್ಧಿ, ಕರ್ನಾಟಕ, ಸಾಂಸ್ಕೃತಿಕ ಪರಂಪರೆ, ಸುಸ್ಥಿರ ಪ್ರವಾಸೋದ್ಯಮ*

## ಪೀಠಿಕೆ

ಒಂದು ದೇಶದ, ಪ್ರದೇಶದ ಅಥವಾ ಸ್ಥಳದ ಸಾಂಸ್ಕೃತಿಕ ಪರಂಪರೆ ಅಲ್ಲಿಯ ಜನರ ಚಟುವಟಿಕೆಗಳನ್ನು ಸಂಪನ್ನಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಪರಂಪರೆ ಪ್ರವಾಸೋದ್ಯಮ ಎಂಬ ವಿಭಿನ್ನ ಕ್ಷೇತ್ರವನ್ನು ಗುರುತಿಸಿ ಬೆಳಸಲಾಗುತ್ತಿದೆ. ಪರಂಪರೆ ಎಂಬ ಪದದ ಅರ್ಥವ್ಯಾಪ್ತಿ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುವ, ಮೌಲಿಕವಾದ ಸ್ಥಳ, ಸ್ಮಾರಕ, ವಸ್ತು ಮತ್ತು ವಿಷಯಗಳು ಎನ್ನುವುದಾಗಿದೆ. ಪರಂಪರೆ ವಂಸಾನುಕ್ರಮವಾಗಿ ಪ್ರಾಪ್ತವಾಗುವ ಪಿತ್ರಾರ್ಜಿತ ಸ್ವತ್ತು ಎಂಬ ಅರ್ಥ ಹೊಂದಿದೆ. ಇದನ್ನು ಅಗೋಚರ, ಗೋಚರ, ಮತ್ತು ನೈಸರ್ಗಿಕ ಎಂಬ ಮೂರು ವಿಭಾಗಗಳಾಗಿ ಗುರುತಿಸಲಾಗಿದೆ.

ಅಗೋಚರ ಪರಂಪರೆ ವಿಶಾಲ ಅರ್ಥವಿದ್ದು, ಅನೂಚಾನವಾಗಿ ನಡೆದುಕೊಂಡು ಬಂದಿರುವ ಒಂದು ರಾಷ್ಟ್ರದ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ ಪ್ರಕಾರಗಳನ್ನು ಒಳಗೊಂಡಿದೆ. ಇವು ಮಾನವ ಕುಲದ ಸಂಸ್ಕೃತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಇದನ್ನು ಸ್ಥೂಲವಾಗಿ ಮೌಖಿಕ ಸಂಪ್ರದಾಯಗಳು, ಪ್ರದರ್ಶನ ಕಲೆ, ಸಾಮಾಜಿಕ ಪದ್ಧತಿಗಳು, ಹಬ್ಬ ಹರಿದಿನಗಳು ಎಂದು ಗುರುತಿಸಲಾಗಿದೆ. ಈ ನಾಡನ್ನಾಳಿದ ಪ್ರಸಿದ್ಧ

***Please cite this article as:*** ಸವಿತಾ, ಕೆ.ಎಸ್. (2026). ಕರ್ನಾಟಕದಲ್ಲಿ ಪಾರಂಪರಿಕ ಮತ್ತು ಪ್ರವಾಸೋದ್ಯಮದ ಬೆಳವಣಿಗೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(2), 104–108

ರಾಜಮನೆತನಗಳು ಇಲ್ಲಿಯ ಸಾಹಿತ್ಯ, ಸಂಗೀತ ಕಲೆ, ನೃತ್ಯ, ಮತ್ತು ನಾಟಕಗಳನ್ನು ಅಪಾರವಾಗಿ ಪೋಷಿಸಿವೆ. ಹಲವಾರು ರಾಜರುಗಳು ಶ್ರೇಷ್ಠ ಸಂಗೀತಗಾರರನ್ನು , ಕಲಾವಿದರನ್ನು ಹಾಗೂ ಸಾಹಿತಿಗಳನ್ನು ತಮ್ಮ ಆಸ್ಥಾನ ಪ್ರತಿಭೆಗಳನ್ನಾಗಿ ಗುರುತಿಸಿ ಗೌರವಿಸಿ, ಪೋಷಣೆಯಿತ್ತು ಅವರ ಉನ್ನತ ಸಾಧನೆಗೆ ಸಹಾಯ ನೀಡಿದ್ದಾರೆ.

ಗೋಚರ ಪರಂಪರೆಯನ್ನು ಐತಿಹಾಸಿಕ, ಕಲಾತ್ಮಕ, ವಾಸ್ತುಶಿಲ್ಪ ಹಾಗೂ ಪುರಾತತ್ತ್ವ ಮೌಲ್ಯವುಳ್ಳ ಪ್ರಾಚೀನ ಸ್ಮಾರಕಗಳು, ನಿರ್ಮಿತಿಗಳು ಹಾಗೂ ಪಾರಂಪರಿಕ ಕಟ್ಟಡಗಳ ರೂಪದಲ್ಲಿ ಗುರುತಿಸಬಹುದು. ಕರ್ನಾಟಕವು ಕಲೆ ಮತ್ತು ವಾಸ್ತಶಿಲ್ಪ ಕ್ಷೇತ್ರಗಳಲ್ಲಿ ಭಾರತದಲ್ಲೇ ವಿಶಿಷ್ಟ ಸ್ಥಾನ ಗಳಿಸಿದೆ. ನಾಗರ, ದ್ರಾವಿಡ ಮತ್ತು ವೇಸರ ವಾಸ್ತು ಮಾದರಿಗಳು ಹುಟ್ಟಿದ್ದು ಕರ್ನಾಟಕದ ಐಹೊಳೆಯಲ್ಲಿ. ಇವು ಇಲ್ಲಿಂದಲೇ ಭಾರತದ ಎಲ್ಲೆಡೆಗೆ ಪ್ರಸಾರವಾದುದ್ದು. ಬೃಹದಾಕಾರದ ಅಪ್ರತಿಮ ಬಾಹುಬಲಿಯ ಶಿಲ್ಪಗಳನ್ನು ಶ್ರವಣಬೆಳಗೊಳ, ಕಾರ್ಕಳ, ಮೂಡಬಿದರೆ, ಧರ್ಮಸ್ಥಳಗಳಲ್ಲಿ ಕಾಣಬಹುದು. ಪ್ರಾಚೀನ ಚಿತ್ರಕಲೆ ರಚನೆಯಾದುದ್ದು ಕರ್ನಾಟಕಲ್ಲೇ. ಅಜಂತ–ಎಲ್ಲೋರ ಕರ್ನಾಟಕದ ಭಾಗಗಳಾಗಿದ್ದವು. ಚಿತ್ರಕಲೆಯ ಅವಶೇಷಗಳನ್ನು ಬಾದಾಮಿ, ಹಂಪಿ, ಶ್ರವಣಬೆಳಗೊಳ ಮುಂತಾದ ಸ್ಥಳಗಳಲ್ಲಿ ಕಾಣಬಹುದು. ಪ್ರಾಚೀನ ಕಾಲದ ಅರಮನೆಗಳು, ಸುಂದರವು, ಜಗತ್ಪ್ರಸಿದ್ದವಾದ ದೇಗುಲಗಳು, ಕೋಟೆ ಕೊತ್ತಲಗಳು, ಮಸೀದಿಗಳು, ಚರ್ಚುಗಳು ಕರ್ನಾಟಕದಲ್ಲಿವೆ.

ನೈಸರ್ಗಿಕ ಪರಂಪರೆಯಾದ ಬೆಟ್ಟಗುಡ್ಡಗಳು, ಕೆರೆ, ಕಾಲುವೆ, ನದಿ, ಹಳ್ಳಕೊಳ್ಳ, ಸಮುದ್ರ, ಕಾಡು, ವೃಕ್ಷಗಳು, ಗಿಡಮರಗಳು, ಪ್ರಾಣಿ–ಪಕ್ಷಿಗಳು ಮುಂತಾದವು ನಿಸರ್ಗ ನಿರ್ಮಿತವಾದವು. ಐತಿಹಾಸಿಕ ಪರಂಪರೆಯಷ್ಟೇ ಪ್ರಾಕೃತಿಕ ಪರಂಪರೆಯ ತಾಣಗಳು ಪ್ರಾಮುಖ್ಯತೆ ಹೊಂದಿವೆ. ಕರ್ನಾಟಕದ ಬಂಡಿಪುರ ಮತ್ತು ನಾಗರಹೊಳೆ ವಿಶ್ವಪರಂಪರೆಯಲ್ಲಿ ಸೇರಿವೆ.

**ಪ್ರವಾಸೋದ್ಯಮ**

ಪ್ರವಾಸ ಒಂದು ರೋಚಕ ಅನುಭವ. ಪ್ರವಾಸಕ್ಕೆ ಮನಸೋಲದವರೇ ಕಡಿಮೆ. ಪ್ರವಾಸವು ನಾನಾ ಬಗೆಗಳಲ್ಲಿ ನಾನಾ ರೀತಿಯಲ್ಲಿ ಮಾನವನ ಬದುಕಿನ ಭಾಗವಾಗಿದೆ. ಪ್ರವಾಸದಿಂದ ಉಂಟಾಗುವ ಅನುಭವ, ನೆನಪುಗಳು ಆಹ್ಲಾದಕರವಾಗಿದ್ದು, ಮನಸ್ಸಿಗೆ ಮುದ ನೀಡುವಂತಹದು. ಆದ್ದರಿಂದಲ್ಲೇ ನಮ್ಮ ಹಿರಿಯರು **"ಕೋಶ ಓದು, ದೇಶ ಸುತ್ತು"** ಎಂದು ಹೇಳಿ ಪ್ರವಾಸದ ಮಹತ್ವ ತಿಳಿಸಿದ್ದಾರೆ.

ಕರ್ನಾಟಕ ನಿಜಕ್ಕೂ ಪ್ರವಾಸಿಗರ ಸ್ವರ್ಗ. ಇದು ವಿಭಿನ್ನ ವಿವಿಧ ಸಂಸ್ಕೃತಿಗಳಿಗೆ, ಧರ್ಮಗಳಿಗೆ ಮತ್ತು ಪರಂಪರೆಗಳಿಗೆ ಆಶ್ರಯ ನೀಡಿದೆ. ಇಂದೂ ಕೂಡ ಎಲ್ಲಾ ಸಂಸ್ಕೃತಿ ಮತ್ತು ಭಾಷೆಗಳಿಗೆ ಆತಿಥ್ಯ ನೀಡಿದೆ. ಕರ್ನಾಟಕ ಭಾರತದ ಪ್ರವಾಸೋದ್ಯಮದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಲ್ಲಿನ ಭೌಗೋಳಿಕ ಪರಿಸರವು ವೈವಿಧ್ಯತೆಯಿಂದ ಕೂಡಿದೆ. ಇಡಿ ಭಾರತದ ಪ್ರಾಕೃತಿಕ ವೈವಿಧ್ಯತೆಯನ್ನು ಕರ್ನಾಟಕವೊಂದರಲ್ಲೇ ನೋಡಬಹುದಾಗಿದೆ.

- ರಾಜಸ್ಥಾನದ ಮರುಭೂಮಿಯಲ್ಲಿ ನೋಡಬಹುದಾದ, ಆಡಬಹುದಾದ ಆಟಗಳಿಗೆ ಇಲ್ಲಿ ತಲಕಾಡು ಬಳಿಯ ಮರುಳು ಶೇಖರಣೆ ಅವಕಾಶ ಒದಗಿಸುತ್ತದೆ.
- ಸಿಮ್ಲಾ, ಡಾರ್ಜಿಲಿಂಗ್, ನೈನಿತಾಲ್‌ಗಳ ಹವಾಮಾನ, ಪರಿಸರವನ್ನು ಕರ್ನಾಟಕದ ಸ್ವಿಟ್ಜರ್‌ಲ್ಯಾಂಡ್ ಎನಿಸಿರುವ ಕೊಡಗಿನಲ್ಲೇ ಅನುಭವಿಸುವ ಅವಕಾಶವಿದೆ.
- ಸಮುದ್ರದ ಹಿನ್ನೀರ ತಾಣಗಳ ವಿಹಾರಕ್ಕೆ ಕೇರಳಕ್ಕೆ ಹೋಗಬೇಕೆನ್ನುವವರಿಗೆ, ಇದೇ ಸೌಲಭ್ಯ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಲಭ್ಯವಿದೆ.
- ದೆಹಲಿಯ ಸ್ಮಾರಕಗಳಿಗೆ ಸರಿಗಟ್ಟಬಹುದಾದ ವಿಖ್ಯಾತ ಕಟ್ಟಡಗಳು ಬಿಜಾಪುರದಲ್ಲಿದೆ.

- ಉತ್ತರ ಭಾರತ ಮತ್ತು ದಕ್ಷಿಣ ಬಾರತದ ನಾಗರ ಮತ್ತು ದ್ರಾವಿಡ ಶೈಲಿಯ ವಾಸ್ತುಶಿಲ್ಪ ವೈಖರಿಯನ್ನು ಪಟ್ಟದಕಲ್ಲಿನಲ್ಲೇ ಕಾಣ ಬಹುದಾಗಿದೆ.
- ಮಹಾರಾಷ್ಟ್ರ, ಮಧ್ಯಪ್ರದೇಶಗಳ ಕಣಿವೆ, ದಟ್ಟವಾದ ಅರಣ್ಯದ ದೃಶ್ಯಗಳನ್ನು ಇಲ್ಲಿನ ಪಶ್ಚಿಮ ಘಟ್ಟಗಳಲ್ಲಿ ಕಾಣಬಹುದಾಗಿದೆ.
- ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಎತ್ತರವಾದ ಬಾಬಾಬುಡನಗಿರಿ, ಮುಳ್ಳಯ್ಯನಗಿರಿ, ಸಹ್ಯಾದ್ರಿ, ಕೊಡಚಾದ್ರಿ, ಆಗುಂಬೆ ಮೊದಲಾದ ಘಟ್ಟ ಪ್ರದೇಶಗಳು ಇಲ್ಲಿವೆ.

**ಕರ್ನಾಟಕದ ಪ್ರವಾಸೋದ್ಯಮದ ಬೆಳವಣಿಗೆ**

ಪ್ರವಾಸೋದ್ಯಮ ಇಂದು ಪ್ರಮುಖ ಉದ್ದಿಮೆಯಾಗಿ ರೂಪುಗೊಂಡಿದೆ. ಕರ್ನಾಟಕ ಸರ್ಕಾರವು ಪ್ರವಾಸಿ ಚಟುವಟಿಕೆಗಳನ್ನು ಸರ್ಕಾರಿ ವಲಯಗಳನ್ನಾಗಿ ರೂಪಿಸಿ, ಪ್ರವಾಸಿಗರಲ್ಲಿ ಆಸಕ್ತಿಯನ್ನುಂಟು ಮಾಡಲು ಅನೇಕ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ, ಕರ್ನಾಟಕವನ್ನು ಭಾರತದ ಅತ್ಯಂತ ಜನಪ್ರಿಯ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಸೇರ್ಪಡಿಸುವ ನಿಟ್ಟಿನಲ್ಲಿ ಅನೇಕ ನೀತಿಗಳನ್ನು ರಚಿಸುವ ಮೂಲಕ ಪ್ರವಾಸಿ ತಾಣಗಳಲ್ಲಿ ಸಂರಚನೆಯ ಅಭಿವೃದ್ಧಿ, ಉತ್ತಮ ಉದ್ಯೋಗಾವಕಾಶಗಳಿಗಾಗಿ ಕೌಶಲ್ಯಗಳ ಅಭಿವೃದ್ಧಿ, ಬೃಹತ್ ಸುತ್ತಾಟಗಳ ಅಭಿವೃದ್ಧಿ ಮತ್ತು ಅಂತಿಮ ಮೈಲಿಯ ಸಂಪರ್ಕಗಳನ್ನು ಸಾಧಿಸುವ ದಿಸೆಯಲ್ಲಿ ಕಾರ್ಯ ನಿರತವಾಗಿದೆ.

ಪ್ರವಾಸೋದ್ಯಮ ಇಲಾಖೆಯನ್ನು 1974ರಲ್ಲಿ ಸ್ಥಾಪಿಸಲಾಗಿದೆ. ಇದು 19 ಜಿಲ್ಲಾ ಕಛೇರಿಗಳನ್ನು ಮತ್ತು 8 ಪ್ರವಾಸೋದ್ಯಮ ಕಛೇರಿಗಳನ್ನು ಹೊಂದಿದೆ. ಕರ್ನಾಟಕದಲ್ಲಿರುವ ಪ್ರವಾಸಿ ತಾಣಗಳನ್ನು ಗುರುತಿಸುವುದು ಹಾಗೂ ಅವುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ರೂಪಿಸುವುದು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಮುಖ್ಯ ಕರ್ತವ್ಯವಾಗಿದೆ. ಇದರ ಜೊತೆಗೆ ಪರಿಸರ ಪ್ರವಾಸೋದ್ಯಮ, ಸಾಹಸ ಪ್ರವಾಸೋದ್ಯಮ, ವನ್ಯಜೀವಿ ಪ್ರವಾಸೋದ್ಯಮ, ಕ್ರೀಡಾ ಪ್ರವಾಸೋದ್ಯಮ, ಮೊದಲಾದವುಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

ಕರ್ನಾಟಕ ಸರ್ಕಾರವು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡಲು "ರಾಜ್ಯ ಪ್ರವಾಸೋದ್ಯಮ ಸಮಿತಿ"ಯನ್ನು (ದ ಸ್ಟೇಟ್ ಟೂರಿಜಂ ಕೌನ್ಸಿಲ್) 2002ರಲ್ಲಿ ಮುಖ್ಯ ಮಂತ್ರಿಗಳ ಮುಖಂಡತ್ವದಲ್ಲಿ ಸ್ಥಾಪಿಸಿದೆ. ದೇಶ ವಿದೇಶಗಳ ಪ್ರವಾಸೋದ್ಯಮ ತಜ್ಞರನ್ನು ಕರೆಸಿ, ಅವರ ಸಲಹೆಯಂತೆ ಅಭಿವೃದ್ಧಿ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಹಮ್ಮಿಕೊಂಡಿದೆ. ಇದಲ್ಲದೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುವ ರಾಜ್ಯಮಟ್ಟದ ಸಮನ್ವಯ ಸಮಿತಿಯನ್ನು ಸ್ಥಾಪಿಸಲಾಗಿದೆ.

ಪ್ರವಾಸೋದ್ಯಮದ ಅಭಿವೃದ್ಧಿಗೆ ಸರ್ಕಾರದ ಇತರ ಇಲಾಖೆಗಳ ನೆರವನ್ನು ಪಡೆಯುವುದು ಇದರ ಯೋಜನೆಯಾಗಿದೆ. ಈ ಇಲಾಖೆಗೆ ಅಗತ್ಯವಾದ ಮೂಲಸೌಕರ್ಯಗಳಾದ ವಿದ್ಯುತ್‌ಚ್ಛಕ್ತಿ, ನೀರು ರಸ್ತೆ ಭದ್ರತೆ, ಲೈಸೆನ್ಸ್ ಮಾರುಕಟ್ಟೆ ಮೊದಲಾದವುಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ಸ್ಥಾಪಿಸಲಾಗಿದೆ.

ವಿಶ್ವಸಂಸ್ಥೆಯು ಪ್ರವಾಸದ ಆರ್ಥಿಕ, ಪರಿಸರ ಮತ್ತು ಸಾಮಾಜಿಕ ಲಾಭಗಳನ್ನು ಹೆಚ್ಚಿಸಲು, 2002ನೇ ವರ್ಷವನ್ನು "ಅಂತರರಾಷ್ಟ್ರೀಯ ಪರಿಸರ ಪ್ರವಾಸೋದ್ಯಮದ ವರ್ಷ"ವೆಂದು ಘೋಷಿಸಿದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ಸರ್ಕಾರವೂ ಸಹ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಪ್ರವಾಸಿ ಆಕರ್ಷಣೆಯನ್ನು ಹಮ್ಮಿಕೊಂಡಿದೆ. ಇದರ ಅನ್ವಯ 6 ಸ್ಥಳಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ನಡೆಸಲಾಗುತ್ತಿದೆ. ಅವುಗಳೆಂದರೆ:

- ಕಬಿನಿ ರಿವರ್ ಲಾಜ್
- ಬಿ.ಆರ್.ಹಿಲ್ಸ್, ವೈಲ್ಡ್ ಲೈಫ್ ಮತ್ತು ಅಡ್ವೆಂಚರ್ ರೆಸಾರ್ಟ್
- ಕಾವೇರಿ ಫಿಷಿಂಗ್ ಕ್ಯಾಂಪ್
- ದೇವಬಾಗ ಬೀಚ್ ರೆಸಾರ್ಟ್
- ಕಾಳಿ ವೈಲ್ಡ್‌ರ್ ನೆಸ್ ಮತ್ತು ಅಡ್ವೆಂಚರ್ ಕ್ಯಾಂಪ್
- ಬನ್ನೇರುಘಟ್ಟ ನೇಚರ್ ಕ್ಯಾಂಪ್

ಪ್ರವಾಸೋದ್ಯಮವನ್ನು ಮತ್ತಷ್ಟು ಆಕರ್ಷಿತವಾಗಿ ಮಾಡಲು ‘ರಂಗಸ್ಫೂರ್ತಿ’ ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದರ ಮೂಲಕ ಕರ್ನಾಟಕದ ನೈಸರ್ಗಿಕ ಮತ್ತು ಇತಿಹಾಸದ ಪುರಾತತ್ವ ಅದ್ಭುತ ವಸ್ತುಗಳನ್ನು ಪ್ರವಾಸಿಗರಿಗೆ ಅನಾವರಣ ಮಾಡುವುದಾಗಿದೆ.

ಕರ್ನಾಟಕದಲ್ಲಿ ಪ್ರವಾಸಿ ಆಕರ್ಷಣೆಗಳ ಬಗ್ಗೆ ಪ್ರಚಾರ ನೀಡಲು ಇಲಾಖೆಯು ರಾಜ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿ ಮೇಳ ಮತ್ತು ವಸ್ತು ಪ್ರದರ್ಶನಗಳನ್ನು ಆಯೋಜಿಸಿದೆ. ಆ ಮೂಲಕ ಕರ್ನಾಟಕ ಪ್ರವಾಸೋದ್ಯಮದ ಬಗ್ಗೆ ಪರಿಣಾಮಕಾರಿಯಾಗಿ ಪ್ರಚಾರವನ್ನು ನೀಡಲಾಗುತ್ತಿದೆ. ಪ್ರವಾಸಿ ಸ್ಥಳಗಳು ಮತ್ತು ಅಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಒಳಗೊಂಡ ಕೈ ಹೊತ್ತಿಗೆ, ನಕ್ಷೆ, ಸಾಕ್ಷ್ಯ ಚಿತ್ರಗಳು ಮತ್ತು ಸಿ.ಡಿ.ಗಳನ್ನು ಪ್ರಕಟಿಸಿ, ಪ್ರವಾಸಿಗರಿಗೆ ವಿತರಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಕಾರ್ಪೊರೇಷನ್ 2006 ರಲ್ಲಿ ಹಳಿಯ ಮೇಲೆ ಅರಮನೆ ಎಂಬ ರೈಲು ಪ್ರವಾಸವನ್ನು ಆರಂಭಿಸಿದೆ. ಪ್ರವಾಸಿಗರು ತ್ರಿತಾರಾ (ತ್ರಿ ಸ್ಟಾರ್ ಹೋಟೆಲ್) ಹೋಟೆಲ್‌ನಲ್ಲಿ ಪಡೆಯಬಹುದಾದ ಸೌಲಭ್ಯಗಳು ರೈಲು ಬೋಗಿಯಲ್ಲೇ ಲಭ್ಯವಿದೆ. ಪ್ರವಾಸಿಗರ ಸಂಖ್ಯೆಗಳಿಗೆ ಅನುಗುಣವಾಗಿ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ. ಇದೊಂದು ಐಷಾರಾಮಿ ಪ್ರವಾಸವಾಗಿರುತ್ತದೆ.

ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಸಲಹೆಗೆ ಅನುಗುಣವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಕಾರ್ಪೊರೇಷನ್ ಪಶ್ಚಿಮ ಘಟ್ಟಗಳ, ಪರಿಸರ ತಾಣಗಳ ಅಭಿವೃದ್ಧಿಗಾಗಿ ಹೊಸ ಯೋಜನೆ ರೂಪಿಸಿತು. ಇದನ್ನು “ನ್ಯೂ ಎಕೋ ಟ್ಯೂರಿಜಮ್ ಪ್ಲಾನ್” ಎಂದು ಕರೆಯಲಾಗಿದೆ.

“ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್” ಎಂಬ ನಿಗಮವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ 1981ರಲ್ಲಿ ಸ್ಥಾಪಿಸಿತು. ಗಿರಿಧಾಮ ಮತ್ತು ವನ್ಯಧಾಮ ಮೊದಲಾದ ಕಡೆಗಳಲ್ಲಿ ಪ್ರವಾಸಿಗಳಿಗಾಗಿ ಗುಡಾರ, ವಸತಿ ಮತ್ತು ಜಂಗಲ್ ಲಾಡ್ಜಸ್‌ಗಳ ಉಸ್ತವಾರಿಯನ್ನು ಈ ಹೊಸ ನಿಗಮಕ್ಕೆ ವಹಿಸಲಾಗಿದೆ. ನಿಗಮ ವಿವಿಧ ಅರಣ್ಯ ಧಾಮಗಳಲ್ಲಿ ಗುಡಾರ ವಸತಿಗಳನ್ನು ನಿರ್ಮಿಸಿತು.

ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹೊಸದೊಂದು ಪ್ರವಾಸ ಕಾರ್ಯಕ್ರಮವನ್ನು 2005 ರಿಂದ ಆರಂಭಿಸಿದೆ. ಪ್ರತಿಭಾವಂತ ಬಾಲಕಿಯರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಡು ಬಡತನದ ಮಕ್ಕಳಿಗೆ 6 ದಿನಗಳ ಉಚಿತ ಪ್ರವಾಸ ಯೋಜನೆ ರೂಪಿಸಿತು. ಪ್ರತಿ ತಾಲೂಕಿಗೆ 50 ಮಕ್ಕಳ ತಂಡವನ್ನು ಆಯ್ಕೆ ಮಾಡಲಾಗುತ್ತದೆ. ಅವರ ಊಟ, ಉಪಹಾರ. ವಸತಿ, ಪ್ರವಾಸ ಎಲ್ಲದರ ಹೊಣೆಯನ್ನು ಸರ್ವ ಶಿಕ್ಷಣ ಅಭಿಯಾನ ಯೋಜನಾ ನಿರ್ದೇಶಕರು ಹೊತ್ತಿರುತ್ತಾರೆ.

ಹೀಗೆ ಕರ್ನಾಟಕ ಪ್ರವಾಸೋದ್ಯಮ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರವಾಸೋದ್ಯಮದ ಬೆಳವಣಿಗೆಗೆ ಕಾರಣವಾಗಿದ್ದರು. ನೆರೆ ರಾಜ್ಯಗಳಾದ ತಮಿಳುನಾಡು, ಕೇರಳ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮದ ಬೆಳವಣಿಗೆ ಕುಂಠಿತವಾಗಿದ್ದು , ಈ ಬಗ್ಗೆ ಸರ್ಕಾರ ಮತ್ತಷ್ಟು ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಪಾಲಾಕ್ಷ – *ಭಾರತದಲ್ಲಿ ಪ್ರವಾಸೋದ್ಯಮ ಇತಿಹಾಸ.*
- ಶಿವರುದ್ರಸ್ವಾಮಿ, ಎಸ್.ಎನ್ – ಭಾರತೀಯ ಪ್ರವಾಸೋದ್ಯಮ
- ವಿಜಯಲಕ್ಷ್ಮಿ, ಕೆ.ಎಸ್ – *ಇತಿಹಾಸ* ಮತ್ತು *ಪ್ರವಾಸೋದ್ಯಮ*
- *ಕನ್ನಡ ವಿಷಯ ವಿಶ್ವಕೋಶ: ಇತಿಹಾಸ* ಮತ್ತು *ಪುರಾತತ್ವ* – ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ